MVC No.218/2017 C/W 404/2017 RW-3

<u>ದಿನಾಂಕ **04.07.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದ ಃ</u>

ಅಪಘಾತವಾದಾಗ ಮೋಟಾರ್ ಸೈಕಲ್ ನನ್ನದಾಗಿರಲಿಲ್ಲ. ಮೋಟಾರ್ ಸೈಕಲ್ ಅನ್ನು 2005 ರಲ್ಲಿ ಖರೀದಿ ಮಾಡಿರುತ್ತೇನೆ. ಮೋಟಾರ್ ಸೈಕಲ್ ಅನ್ನು ಪ್ರಶಾಂತ್ ಜಿ ಗೆ ದಿಃ10.08.2012 ರಲ್ಲಿ ಮಾರಾಟ ಮಾಡಿರುತ್ತೇನೆ. ಮೋಟಾರ್ ಸೈಕಲ್ ಪ್ರಕಾಶ್ ಜಿ ಗೆ ವರ್ಗಾವಣೆಯಾಗಲು ಆರ್ ಟಿ ಒ ಗೆ ಅರ್ಜಿ ಕೊಟ್ಟಿದ್ದೆ. ನಂತರ ಅದು ಏನಾಯಿತು ಎಂದು ಪರಿಶೀಲನೆ ಮಾಡಿಲ್ಲ. 2012 ರಿಂದ 2017 ರವರೆಗೂ ಮೋಟಾರ್ ಸೈಕಲ್ ನನ್ನ ಹೆಸರಿನಲ್ಲಿತ್ತು. ಅಪಘಾತವಾದಾಗ ಮೋಟಾರ್ ಸೈಕಲ್ ನನ್ನ ಹೆಸರಿನಲ್ಲಿತ್ತು. ಅಪಘಾತವಾದ ದಿನ ಮೋಟಾರ್ ಸೈಕಲ್ ಅನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ಪೊಲೀಸರು ನನಗೆ ನೋಟೀಸ್ ಕೊಟ್ಟಿಲ್ಲ. ಮೋಟಾರ್ ಸೈಕಲ್ ವಾಹನವನ್ನು ನಾನು ಠಾಣೆಯಿಂದ ಬಿಡಿಸಿಕೊಳ್ಳಲಿಲ್ಲ. ಬೇರೆ ವಾಹನದಿಂದ ಅಪಘಾತವಾಗಿದ್ದರೂ ಸಹ ನನ್ನ ವಾಹನವನ್ನು ಈ ಪ್ರಕರಣದಲ್ಲಿ ಪರಿಹಾರ ಪಡೆಯಲು ಸೇರಿಸಿದ್ದೇನೆಂದರೆ ಸುಳ್ಳು. ನನ್ನ ಮೋಟಾರ್ ಸೈಕಲ್ ಬಜಾಜ್ ಕಂಪನಿಗೆ ಸೇರಿದ್ದು. ಅಪಘಾತಪಡಿಸಿದ ವಾಹನ ಹಿರೋ ಹೋಂಡಾ ಎಂದರೆ ಗೊತ್ತಿಲ್ಲ. ಶ್ರೀಧರ್ ರವರು ಅಪಘಾತವಾದಾಗ ವಾಹನ ಓಡಿಸುತ್ತಿದ್ದರು ಮತ್ತು ಅವರಿಗೆ ಡಿಎಲ್ ಇರಲಿಲ್ಲ ಎಂದರೆ ಗೊತ್ತಿಲ್ಲ. ಶರತ್ ಎನ್ನುವವರ ಮೇಲೆ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಶ್ರೀಧರ್ ಮತ್ತು ಶರತ್ ಸ್ನೇಹಿತರು. ಪ್ರಶಾಂತ್ ಜಿ ರವರನ್ನು ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ. ಮೋಟಾರ್ ಸೈಕಲ್ ನಂಬರ್ ಕೆ ಎ 05 ಇ ಎಕ್ಸ್ 3337 ನಿಂದ ಅಪಘಾತವಾಗಿಲ್ಲ ಎಂದರೆ ಗೊತ್ತಿಲ್ಲ. ಅಪಘಾತವಾದ ನಂತರ ವಾಹನವನ್ನು ನೋಡಿಲ್ಲ. ಪ್ರಕರಣದ ವಿಚಾರಗಳು ಗೊತ್ತಿದ್ದರೂ ಸಹ ವಾಹನವನ್ನು ಮಾರಾಟ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಈಗಲೂ ಸಹ ಮೋಟಾರ್ ಸೈಕಲ್ ನ ಮಾಲೀಕ ನಾನೇ

ಎಂದರೆ ಸುಳ್ಳು. ನ್ಯಾಯಾಲಯಕ್ಕೆ ಪ್ರಶಾಂತ್ ರವರ ವಿಳಾಸ ಕೊಡಲು ತೊಂದರೆ ಇಲ್ಲ. ನಾನು ಪರಿಹಾರ ಕೊಡಬೇಕುಗುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.